ಅ) ಬಸವಕಲ್ಯಾಣದಲ್ಲಿ ಸಮಾಜಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ವಸತಿ ಗೃಹಗಳೆಷ್ಟು?

ಆ) ಅವುಗಳ ಪೈಕಿ ಎಷ್ಟು ವಸತಿಗೃಹಗಳು ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿದೆ?

ಇ) ಬಸವಕಲ್ಯಾಣದಲ್ಲಿ ವಸತಿಗೃಹಗಳು ಖಾಸಗೀಕಟ್ಟಡಗಳಲ್ಲಿ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹೊಸ ಕಟ್ಟಡ ಕಟ್ಟಲು ಜಾಗವಿರುವುದರಿಂದ 1994-95ರಲ್ಲಿ ಮಂಜೂರಾತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಧರ್ಮಸಿಂಗ್ (ಕಂದಾಯ ಹಾಗು ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗಾಗಿ ಈ ಕೆಳಕಂಡ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

1.	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು	- 2
2.	ಮೆಟ್ರಿಕ್‌ನಂತರದ ವಿದ್ಯಾರ್ಥಿನಿಲಯ	- 1
	ಒಟ್ಟು	3

ಆ) ಒಂದು ಮೆಟ್ರಿಕ್‌ನಂತರದ (ಬಾಲಕರ) ವಿದ್ಯಾರ್ಥಿನಿಲಯ ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇ) ಹೌದು

ಈ) ಖಾಸಗಿ ಕಟ್ಟಡದಲ್ಲಿ ನಡೆಯುತ್ತಿರುವ ಎರಡು ವಿದ್ಯಾರ್ಥಿನಿಲಯಗಳ ಪೈಕಿ ಒಂದು ವಿದ್ಯಾರ್ಥಿ ನಿಲಯಕ್ಕೆ ನಿವೇಶನವನ್ನು ಪಡೆಯಲಾಗಿದೆ. ಮತ್ತೊಂದು ನಿವೇಶನವನ್ನು ಪಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಣದ ಲಭ್ಯತೆಯನ್ನು ಆಧರಿಸಿ 94-95ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬಸವಕಲ್ಯಾಣದಲ್ಲಿ ಕೈಗಾರಿಕಾ ಶೆಡ್‌ಗಳ ಸ್ಥಾಪನೆ

648 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣದಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರದವರು ಎಷ್ಟು ಎಕರೆ ಜಮೀನನ್ನು ಕೈಗಾರಿಕಾ ಶೆಡ್‌ಗಳನ್ನು ಸ್ಥಾಪಿಸುವ ಸಲುವಾಗಿ ರೈತರಿಂದ ಸ್ವಾಧೀನಪಡಿಸಿಕೊಂಡಿದ್ದಾರೆ?

ಆ) ಇಲ್ಲಿಯವರೆಗೆ ರೈತರಿಗೆ ಕೊಟ್ಟಿರುವ ಪರಿಹಾರ ಧನವೆಷ್ಟು?

ಇ) ಇಲ್ಲಿಯವರೆಗೆ ಯಾವುದೇ ಕೆಲಸಗಳನ್ನು ಕೈಗೊಳ್ಳದೇ ಇರಲು ಕಾರಣಗಳೇನು?

ಈ) ಯಾವಾಗ ಕೈಗಾರಿಕಾ ಶೆಡ್‌ಗಳನ್ನು ಸ್ಥಾಪಿಸುವ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು?

ಶ್ರೀ ರಾಮಲಿಂಗರೆಡ್ಡಿ (ಭಾರಿ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ಮಂಡಳಿಯು ಬಸವಕಲ್ಯಾಣದಲ್ಲಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸುವ ಸಲುವಾಗಿ 91 ಎಕರೆ 9 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ. ಆದರ ಜೊತೆಗೆ 5 ಎಕರೆ 36 ಗುಂಟೆ ಹೆಚ್ಚುವರಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಮಂಡಳಿಯು ತೀರ್ಮಾನ ಕೈಗೊಂಡಿದ್ದು ಭೂ ಸ್ವಾಧೀನ ಕ್ರಮಗಳನ್ನು ಜಾರಿಯಲ್ಲಿವೆ.

ಆ) ಸದರಿ ಜಮೀನಿಗೆ ಒಪ್ಪಂದದ ಪ್ರಕಾರ ಎಕರೆ ಒಂದಕ್ಕೆ ರೂ. 55,000-00 ದಂತೆ ಒಟ್ಟು ರೂ. 50,17,375-00ಗಳನ್ನು ಭೂ ಮಾಲೀಕರಿಗೆ ವಿತರಣೆ ಮಾಡಲು ಗುಲ್ಬರ್ಗಾ ವಿಶೇಷ ಭೂಸ್ವಾಧೀನ ಅಧಿಕಾರಿಯವರಿಗೆ ದಿನಾಂಕ : 20-3-91ರಂದು ಬಿಡುಗಡೆ ಮಾಡಲಾಗಿ ಸದರಿ ಹಣವನ್ನು ಭೂ ಮಾಲೀಕರಿಗೆ ಹಂಚಲಾಗಿದೆ.

ಇ) ಬೀದರ್ ಜಿಲ್ಲೆಯಲ್ಲಿ ನವಾಬಾದ್ ಕೊಲ್ಲಾರ್ ಗ್ರಾಮಗಳಲ್ಲಿ ಸುಮಾರು 1000 ಎಕರೆ ಜಮೀನು ಹುಮ್ನಾಬಾದ್ ಗ್ರಾಮಗಳಲ್ಲಿ ಸುಮಾರು 500 ಎಕರೆ ಜಮೀನುಗಳಲ್ಲಿ ಈಗಾಗಲೇ ಕೈಗಾರಿಕಾ ಪ್ರದೇಶಗಳನ್ನು ನಿರ್ಮಿಸಿದ್ದು ಕೈಗಾರಿಕಾಭಿವೃದ್ಧಿಯು ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲ. ಆದುದರಿಂದ ಬಸವಕಲ್ಯಾಣದಲ್ಲಿ ಕೈಗಾರಿಕಾ ಪ್ರದೇಶವನ್ನು ನಿರ್ಮಿಸುವ ಕಾರ್ಯವು ಸ್ವಲ್ಪ ವಿಳಂಬವಾಗಿರುವುದು.

ಬಸವಕಲ್ಯಾಣದ ಕೈಗಾರಿಕಾ ಪ್ರದೇಶದ ರೂಪರೇಖೆಗಳನ್ನು ಈಗಾಗಲೇ ತಯಾರು ಮಾಡಲಾಗಿದ್ದು ಈ ಪ್ರದೇಶದ ದರವನ್ನು ನಿರ್ಧರಿಸುವ ಬಗ್ಗೆ ಮಂಡಳಿಯ ಕಾಮಗಾರಿ ಸಮಿತಿ (ವರ್ಕ್ಸ್ ಕಮಿಟಿ)ಯ ಸಲಹೆಯನ್ನು ಪಡೆದು ಕೈಗಾರಿಕಾ ಪ್ರದೇಶದ ರೂಪರೇಖೆಗಳನ್ನು ಅನುಮೋದನೆಗಾಗಿ ಸದ್ಯದಲ್ಲಿಯೇ ಮಂಡಳಿಯ ಸಭೆಗೆ ಮಂಡಿಸಲಾಗುವುದು.

ಈ) ಕೈಗಾರಿಕೆಯ ರೂಪರೇಖೆಗಳು ಅನುಮೋದಿತವಾದ ಕೂಡಲೇ ಕೈಗಾರಿಕಾ ಶೆಡ್‌ಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಲಾಗುವುದು.

ಬೆಳಗಾಂ ಜಿಲ್ಲೆ ಸಾಂಬ್ರಾ ಗ್ರಾಮದಲ್ಲಿ ಆಶ್ರಯ ಯೋಜನೆ

594-ಶ್ರೀ ಕೆ.ಸಿ. ಮೂಡಗೇಕರ್ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಳಗಾಂ ಜಿಲ್ಲೆ ಸಾಂಬ್ರಾ ಗ್ರಾಮ ಸರ್ವೆ ನಂ. 149ನ್ನು ಪಿ.ಡಬ್ಲ್ಯೂಡಿ. ಇಲಾಖೆಯಿಂದ ಶಿಫಾರಸ್ಸಾಗಿ ಆಶ್ರಯ ಯೋಜನೆಗೆ ಪಡೆಯಲಾಗಿದೆಯೇ?*

ಆ) *ಹಾಗಾದರೆ ಸರ್ಕಾರದ ಕ್ರಮವೇನು?*

ಶ್ರೀ ಗೋಪಿನಾಥ್ ಆರ್. ಸಾಂಡ್ರ (ವಸತಿ ಸಚಿವರು):

ಅ) ಬೆಳಗಾಂ ಜಿಲ್ಲೆ ಸಾಂಬ್ರಾ ಗ್ರಾಮ ಸರ್ವೆ ನಂ. 149ರ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿದ್ದು, ಆಶ್ರಯ ಯೋಜನೆಗಾಗಿ ಶಿಫಾರಸ್ಸು ಮಾಡಲಾಗಿದೆ. ಚೀಫ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರಲ್ಲಿ ಪ್ರಸ್ತಾವನೆ ಇದ್ದು, ಲೋಕೋಪಯೋಗಿ ಇಲಾಖೆ ಧಾರವಾಡದಿಂದ ಮುಖ್ಯ ಅಭಾಯಂತರರ ಅನುಮತಿ ಪಡೆದ ನಂತರ ಸ್ವತ್ತನ್ನು ಆಶ್ರಯ ಯೋಜನೆಗೆ ಅನುಮತಿ ನೀಡಲಾಗುವುದು.

ಆ) ಧಾರವಾಡ ಲೋಕೋಪಯೋಗಿ ಇಲಾಖೆ ಮುಖ್ಯ ಅಭಿಯಂತರರಿಗೆ ಅನುಮತಿ ನೀಡಲು ಕೋರಲಾಗಿದೆ.

ಭೂ ಸುಧಾರಣೆಯಡಿಯಲ್ಲಿ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದವರಿಗೆ ಹೆಚ್ಚುವರಿ ಭೂಮಿ

597-ಶ್ರೀ ಕೆ.ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭೂ ಸುಧಾರಣೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಇತರರಿಗೆ ಹೆಚ್ಚುವರಿ ಭೂಮಿಯನ್ನು ವಿತರಿಸಲು ಸರ್ಕಾರವು ಯುಕ್ತ ಕ್ರಮ ಕೈಗೊಳ್ಳಲು ಪರಿಶೀಲಿಸಿರುತ್ತದೆಯೇ?*

ಆ) *ಭೂ ಸುಧಾರಣೆಯಡಿಯಲ್ಲಿ, ಪರಿಶಿಷ್ಟ ಜಾತಿಯವರಿಗೆ ಹೆಚ್ಚುವರಿ ಜಮೀನು ಹಂಚಿರುವುದು ಕಡಿಮೆಯೆಂದು, ಅದನ್ನು ತುಂಬಲು ಸರ್ಕಾರದ ಎಲ್ಲಾ ಹೆಚ್ಚುವರಿ ಜಮೀನನ್ನು ಪರಿಶಿಷ್ಟ ಜಾತಿಯವರಿಗೆ ಹಂಚಲು ಸರ್ಕಾರವು ಪರಿಶೀಲಿಸುವುದೇ?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಹೌದು.